


ಕ್ಷಮಾ ರಾವ್ ರಚಿಸಿದ ಚಿತ್ರ

ಒಂದು ಶಿಸ್ತಿಗೆ ಒಳಗಾಗಿ ನೃತ್ಯ ಕಲಿಯಬೇಕು ಎಂದು ಆಗಲೇ ಅಂದುಕೊಂಡಿದ್ದೆ.

◆ **ಪುತ್ತೂರಿನಲ್ಲಿಯೇ ನೀವು ನೃತ್ಯ ತರಗತಿಗಳಿಗೆ ಸೇರಿಕೊಂಡಿರಾ?**

ಆರಂಭವೇನೋ ಅಲ್ಲಿಯೇ ಆಯಿತು. ಪುತ್ತೂರಿನ ಕುದ್ಕಾಡಿ ವಿಶ್ವನಾಥ ರೈ ಅವರು ನಡೆಸುತ್ತಿದ್ದ ಭರತನಾಟ್ಯ ತರಗತಿಗೆ ಸೇರಿಕೊಂಡೆ. ನಂತರ ಉಡುಪಿಯಲ್ಲಿ ಎಂಜಿಎಂ ಕಾಲೇಜು ಸೇರಿದಾಗ ನೃತ್ಯ ಮುಂದುವರೆಸುವ ಅವಕಾಶ ಸಿಗಲಿಲ್ಲ. ನನ್ನ ಆಸಕ್ತಿಯು ಅಂತರಂಗದಲ್ಲಿಯೇ ಮೊಳಕೆಯಾಗಿ ಕುಳಿತಿತ್ತು. ಮದುವೆಯಾದ ಬಳಿಕ ನಾವು ಮದ್ರಾಸಿನಲ್ಲಿ ಕಲಾಕ್ಷೇತ್ರದ ಬಳಿಯೇ ಮನೆ ಮಾಡಿಕೊಂಡಿದ್ವಿ. ಅಲ್ಲಿ ನಾನು ಇನ್ನಷ್ಟು ಹೊಸ ವಿಷಯ ಕಲಿತೆ. ಆಗ ಸೈಕ್ಲಿಂಗ್ ಕೂಡ ಕಲಿತೆ. ಪಕ್ಕದಲ್ಲೇ ಇರುವ ಕಲಾಕ್ಷೇತ್ರಕ್ಕೆ ತೆರಳಿ ಮತ್ತೆ ಭರತನಾಟ್ಯ ಕಲಿಯಲೇ ಎಂದು ಬಹಳ ಆಸೆಯಾಗುತ್ತಿತ್ತು. ಮಗ ಸ್ವಲ್ಪ ದೊಡ್ಡವನಾಗುತ್ತಿದ್ದಂತೆಯೇ ನಾನು ಕಲಾಕ್ಷೇತ್ರಕ್ಕೆ ತೆರಳಿಯೇಬಿಟ್ಟೆ. ಅಲ್ಲಿ ಗುರು ರುಕ್ಮಿಣಿ ದೇವಿ ಅರುಂಡೇಲು ಅವರ ಪರಿಚಯವಾಯಿತು. ಎತ್ತರದ ನಿಲುವಿನ, ಉದಾರ ಮನಸ್ಸಿನ, ದೂರದೃಷ್ಟಿಯೊಂದಿಗೆ ಆಲೋಚಿಸಬಲ್ಲ ಅವರೊಬ್ಬ ಧೀಮಂತ ಮಹಿಳೆಯಾಗಿದ್ದರು. ಸದಾ ರಚನಾತ್ಮಕವಾದ ಕಾಯಕಗಳಲ್ಲಿ ತೊಡಗಿಸಿಕೊಂಡು ಕಲಿಕೆಗೆ ಪ್ರೋತ್ಸಾಹ ನೀಡುತ್ತಿದ್ದರು. 'ನಿನಗೆ ಬೇಕಾದ್ದನ್ನು ಇಲ್ಲಿ ನೀನು ಕಲಿಯಬಹುದು' ಎಂದು ನನ್ನ ಬೆನ್ನುತಟ್ಟುತ್ತಿದ್ದರು. ಸ್ವಲ್ಪ ಕಾಲ ಅಲ್ಲಿ ಭರತನಾಟ್ಯ ಕಲಿಯುತ್ತಿದ್ದಂತೆಯೇ, ಅಲ್ಲಿ ಕಲಿಸುತ್ತಿದ್ದ ಭರತನಾಟ್ಯ ಶೈಲಿಯು ತುಂಬ ಶ್ರಮದಾಯಕ ಎನಿಸಿತು. ಅಲ್ಲದೆ ಅಲ್ಲಿಯೇ ನಡೆಯುತ್ತಿದ್ದ ಒಡಿಸ್ಸಿ ತರಗತಿಯತ್ತ ನನ್ನ ಗಮನ ಹರಿಯಿತು. ಅದೇಕೋ, ಒಡಿಸ್ಸಿಯ ಲಾಸ್ಯಮಯ ನೃತ್ಯವಿಧಾನ ನನ್ನನ್ನು ಬಹಳವಾಗಿ ಆಕರ್ಷಿಸಿತು. ನಾನು ಭರತನಾಟ್ಯದಿಂದ ಒಡಿಸ್ಸಿ ಕಲಿಕೆಯತ್ತ ತೆರಳುತ್ತೇನೆ ಎಂದಾಗ, ರುಕ್ಮಿಣಿ ದೇವಿ ಅವರು ಕೊಂಚವೂ ಸಿಟ್ಟುಮಾಡಿಕೊಳ್ಳಲಿಲ್ಲ. 'ನಿನ್ನ ಆಸಕ್ತಿಯನ್ನು